## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ 13-09-2022

### ಚಿಟಗುಪ್ಪಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 112/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ:12-09-2022 ರಂದು ಪಿಎಸ್ಐ ರವರಿಗೆ ಮಧ್ಯಾಹ್ನ 13.00 ಗಂಟೆಗೆ ಖಚಿತ ಬಾತ್ಮಿ ಬಂದಿದ್ದೇನೆಂದರೆ, ರಾಮಪೂರ ಗ್ರಾಮದ ರಾಮಲಿಂಗೇಶ್ವರ ಮುಂದಿರದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಹಣ ಹಚ್ಚಿ ಅಂದರ ಬಾಹರ ಎಂಬ ಎಂಬ ನಸೀಬಿನ ಜೂಜಾಟ ಆಡುತ್ತಿದ್ದಾರೆ ಅಂತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ರಾಮಪೂರ ಗ್ರಾಮದ ರಾಮಲಿಂಗೇಶ್ವರ ಮಂದಿರದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಮರೆಯಾಗಿ ನಿಂತು ನೋಡಲು 5-6 ಜನ ಜೂಜಾಟದಲ್ಲಿ ನಿರತರಾಗಿರುವುದನ್ನು ನೋಡಿ ಖಚಿತ ಮಾಡಿಕೊಂಡು ಅವರ ಮೇಲೆ ದಾಳಿ ಮಾಡಿ ಹಿಡಿಯಲು 06 ಜನರು ಸಿಕ್ಕಿದ್ದು, ಅವರ ಹೆಸರು ಮತ್ತು ವಿಳಾಸ ವಿಚಾರಿಸಿ ಅಂಗ ಪರಿಶೀಲನೆ ಮಾಡಲು 1] ರೇವಣಸಿದ್ದಪ್ಪಾ ತಂದೆ ಗುರುಲಿಂಗಪ್ಪಾ ಕೊರವಿ, ವಯ:54 ವರ್ಷ, ಜಾ:ಲಿಂಗಾಯತ, ಉ: ಒಕ್ಕುಲತನ ಸಾ:ಡೋರ ಜಂಮಗಿ ತಾ/ಕಮಲಾಪೂರ, ಈತನಿಂದ ನಗದು ಹಣ ರೂ.1500/- ಸಿಕ್ಕಿದ್ದು, 2] ಮಂಜುನಾಥ ತಂದೆ ಬಸವಣಪ್ಪಾ ಚಿಲಶೆಟ್ಟಿ ವಯ:48 ವರ್ಷ, ಜಾ:ಲಿಂಗಾಯತ, ಉ: ಒಕ್ಕುಲತನ ಸಾ:ಹಳ್ಳಿಖೇಡ(ಕೆ) ಈತನಿಂದ ನಗದು ಹಣ ರೂ.1200/- ಸಿಕ್ಕಿದ್ದು, 3] ಭೀಮಶಾ ತಂದೆ ನಾಗಪ್ಪಾ ಕೋರಿ, ವಯ:49 ವರ್ಷ, ಜಾ:ಲಿಂಗಾಯತ, ಉ: ಒಕ್ಕುಲತನ ಸಾ:ಚಿತಕೋಟ ಈತನಿಂದ ನಗದು ಹಣ ರೂ.850/- ಸಿಕ್ಕಿದ್ದು, 4] ರವೀಂದ್ರ ತಂದೆ ವೀರಣ್ಣಾ ಬಿರಾದರ, ವಯ:54 ವರ್ಷ, ಜಾ:ಲಿಂಗಾಯತ, ಉ: ಒಕ್ಕುಲತನ ಸಾ:ಹಳ್ಳಿಖೇಡ(ಕೆ) ಈತನಿಂದ ನಗದು ಹಣ ರೂ.1500/- ಸಿಕ್ಕಿದ್ದು, 5] ಶಾಂತಕುಮಾರ ತಂದೆ ಬಸವಣಪ್ಪಾ ಬಿರಾದರ, ವಯ:65 ವರ್ಷ, ಜಾ:ಲಿಂಗಾಯತ, ಉ: ಒಕ್ಕುಲತನ ಸಾ: ಧನ್ನೂರ, ಈತನಿಂದ ನಗದು ಹಣ ರೂ.2700/- ಸಿಕ್ಕಿದ್ದು, 6] ಶಾಮರಾವ ತಂದೆ ಚಂದ್ರಪ್ಪಾ ರಟಕಲ, ವಯ:64 ವರ್ಷ, ಜಾ:ಲಿಂಗಾಯತ, ಉ: ಒಕ್ಕುಲತನ ಸಾ:ಹಳ್ಳಿಖೇಡ(ಕೆ), ಈತನಿಂದ ನಗದು ಹಣ ರೂ.950/- ಸಿಕ್ಕಿದ್ದು, ಎಲ್ಲರ ಮಧ್ಯೆ ನಗದು ಹಣ 800/-ರೂ. ಹಾಗು 52 ಇಸ್ಪೀಟ್ ಎಲೆಗಳು ಸಿಕ್ಕಿದ್ದು, ಹೀಗೆ ಎಲ್ಲ ಸೇರಿ ಒಟ್ಟು ನಗದು ಹಣ 9,500/-ರೂ. ಹಾಗು 52 ಇಸ್ಪೀಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 108/2022 ಕಲಂ 32, 34 ಕೆ.ಇ. :-

ದಿನಾಂಕ 12/09/2022 ರಂದು ಪಿಎಸ್ಐ ರವರು ಠಾಣೆಯ ಸರಹದ್ದಿನಲ್ಲಿ ಪೆಟ್ರೋಲಿಂಗ ಮಾಡುತ್ತಾ ರಾಜೇಶ್ವರ ಗ್ರಾಮದಲ್ಲಿದ್ದಾಗ 12:30 ಗಂಟೆಗೆ ಅವರಿಗೆ ಮಾಹಿತಿ ಬಂದಿದೇನೆಂದರೆ ಇಸ್ಲಾಂಪೂರ ಗ್ರಾಮದ ರಾಯಣ್ಣಾ ಚೌಕ ಹತ್ತಿರ ಇಬ್ಬರು ಸಾರ್ವಜನಿಕ ಖುಲ್ಲಾ ಜಾಗೆಯಲ್ಲಿ ಕುಳಿತು ತಮ್ಮ ಹತ್ತಿರ ಸರಾಯಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತಿದ್ದಾರೆ. ಅಂತಾ ಮಾಹಿತಿ ಮೇರೆಗೆ ಸಿಬ್ಬಂದಿಯೊಂದಿಗೆ ನಡೆದುಕೊಂಡು ಹೋಗಿ ರಾಯಣ್ಣಾ ಚೌಕದಿಂದ ಸ್ವಲ್ಪ ದೂರಿದಲ್ಲಿ ಮರೆಯಲ್ಲಿ ನಿಂತು ನೋಡಲು ರಾಯಣ್ಣಾ ಚೌಕ ಹತ್ತಿರ ಇಬ್ಬರು ತಮ್ಮ ಹತ್ತಿರ ಚೀಲದಲ್ಲಿ ಸರಾಯಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದನ್ನು ಖಚಿತ ಪಡಿಸಿಕೊಂಡು ಸದರಿಯವರ ಮೇಲೆ ಸಿಬ್ಬಂದಿಯವರ ಸಹಾಯದಿಂದ ಪಂಚರ ಸಮಕ್ಷಮ 13:30 ಗಂಟೆಗೆ ದಾಳಿ ಮಾಡಿ ಸದರಿಯವರಿಗೆ ಹಿಡಿದು ವಿಚಾರಿಸಲು ತಮ್ಮ ಹೆಸರು ಅಶೋಕ ತಂದೆ ನಾಗಣ್ಣಾ ಕಂಠೆಕರ ವಯ:34 ವರ್ಷ ಜಾತಿ:ಎಸ,ಟಿ ಗೊಂಡ ಉ:ಹೋಟೇಲ ವ್ಯಾಪಾರ ಸಾ:ರಾಜೇಶ್ವರ ಸಧ್ಯ ಇಸ್ಲಾಂಪೂರ ಅಂತಾ ತಿಳಿಸಿದನು ನಂತರ ಮತ್ತೊಬ್ಬನಿಗೆ ವಿಚಾರಿಸಲು ತನ್ನ ಹೆಸರು ಬಸವರಾಜ ತಂದೆ ಮನೋಹರ ಛಪ್ರಾಸಿ ವಯ:32 ವರ್ಷ ಜಾತಿ:ಎಸ,ಟಿ ಕೋಳಿ ಉ:ಕೂಲಿಕೆಲಸ ಸಾ:ಇಸ್ಲಾಂಪೂರ ಅಂತಾ ತಿಳಿಸಿದನು ಹತ್ತಿರ ಇದ್ದ ಚೀಲದಲ್ಲಿ ಪರಿಶೀಲಿಸಿ ನೋಡಲು 1) ಒಂದು ಚೀಲದಲ್ಲಿ ಒರಿಜಿನಲ್ ಚಾಯ್ಸ ವಿಸ್ಕಿ ಎಮ್.ಎಲ್. 30 ಟೆಟ್ರಾ ಪ್ಯಾಕೆಟಗಳು ಒಂದರ ಬೆಲೆ 35 ಒಟ್ಟು 1,050/- ರೂ ಬೆಲೆವುಳ್ಳ ಸರಾಯಿ ಇದ್ದು ಹಾಗೂ ಸರಾಯಿ ಮಾರಾಟದಿಂದ ಬಂದ ನಗದು ಹಣ 560/- ರೂ ಸಿಕ್ಕಿದ್ದು, ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 138/2022 ಕಲಂ 457, 380 ಐಪಿಸಿ :-

ದಿನಾಂಕ 11/09/2022 ರಂದು 1700 ಗಂಟೆಗೆ ಫಿರ್ಯಾದಿ ದೀಪಕ ತಂದೆ ನೀಲಪ್ಪಾ ಗುಪ್ತಾ ವಯ : 56 ವರ್ಷ ಉ: ನ್ಯಾಯವಾದಿಗಳು (ವಕೀಲರು) ಸಾ: ಸಂಗಮೇಶ್ವರ ಕಾಲೋನಿ ರಾಮಮಂದಿರ ಹಿಂದುಗಡೆ ಚಿದ್ರಿ ರಸ್ತೆ ಬೀದರ ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರು ನೀಡಿದ ಸಾರಾಂಶವೆನೆಂದರೆ ದಿನಾಂಕ 29/08/2022 ರಂದು ರಾತ್ರಿ 9:00 ಗಂಟೆಗೆ ಖಾಸಗಿ ಕೆಲಸದ ನಿಮಿತ್ಯ ಮನೆಗೆ ಬೀಗ ಹಾಕಿ ಹೋಗಿದಾಗ ಮನೆಯ ಬೀಗ ಮುರಿದು 1] ಒಂದು ಬಂಗಾರದ ಗಂಟನ್ 20 ಗ್ರಾಂ ತೂಕವುಳ್ಳದ್ದು ಅಂ.ಕಿ 80,000/- 2] ಒಂದು ಬಂಗಾರದ ನೇಕ್ಲೆಸ್ 05 ಗ್ರಾಂ ತೂಕವುಳ್ಳ ಅಂ.ಕಿ 20,000/- 3] ಮೂರು ಬಂಗಾರದ ಕೈ ಉಂಗುರಗಳು ಒಟ್ಟು 09 ಗ್ರಾಂ ತೂಕವುಳ್ಳ ಅಂ.ಕಿ 36,000/- 4] ನಗದು ಹಣ 10000/- ರೂ ಹೀಗೆ ಒಟ್ಟು 34 ಗ್ರಾಂ ಬಂಗಾರದ ಆಭರಣಗಳು ಅಂ.ಕಿ 1,36,000/- ರೂ ಮತ್ತು ನಗದು ಹಣ ಸೇರಿ ಹೀಗೆ ಎಲ್ಲಾ ಸೇರಿ ಒಟ್ಟು 1,46,000 ರೂ ಮೌಲ್ಯದ ವಸ್ತುಗಳು ಕಳವು ಆಗಿರುತ್ತವೆ. ದಿನಾಂಕ 29/08/2022 ರಂದು ರಾತ್ರಿ 9:00 ಗಂಟೆಯಿಂದ ದಿನಾಂಕ 30/08/2022 ರಂದು ಮುಂಜಾನೆ 7:00 ಗಂಟೆಯ ಅವಧಿಯಲ್ಲಿ ಯಾರೋ ಕಳ್ಳರು ನಮ್ಮ ಮನೆಗೆ ಹಾಕಿದ ಕೀಲಿಯನ್ನು ಮುರಿದು ಮನೆಯಲ್ಲಿ ಪ್ರವೇಶಿಸಿ ಮನೆಯಲ್ಲಿದ್ದ ಅಲಮಾರಾ ಕೀಲಿಯನ್ನು ಮುರಿದು ಈ ಮೇಲ್ಕಂಡ ಆಭರಣಗಳು ಹಾಗೂ ನಗದು ಹಣ ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಧನ್ನೂರಾ ಪೊಲೀಸ್ ಠಾಣೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 128/2022 ಕಲಂ 457, 380 ಐಪಿಸಿ :-

ದಿನಾಂಕ: 12/09/2022 ರಂದು 1330 ಗಂಟೆಗೆ ಫಿರ್ಯಾದಿ ಶ್ರೀ ರಮೇಶ ತಂದೆ ಶಿವನಾಯಕ ಶ್ರೀಗನ ವಯ: 55 ವರ್ಷ ಜಾತಿ: ಎಸ್.ಸಿ ಮಾದಿಗ ಉ: ಹೊತಾ ಮತ್ತು ಆಡುಗಳು ಸಾಕುವದು ಸಾ: ಕೊಟಗ್ಯಾಳ ಇವರು ಠಾಣೆಗೆ ಹಾಜರಾಗಿ ತಮ್ಮ ದೂರು ಅರ್ಜಿ ನೀಡಿದ್ದು ಅದರ ಸಾರಾಂಶ ವೇನೆಂದರೆ ಸದ್ಯ ಇವರ ಹತ್ತಿರ 6 ಹೊತಾಗಳು, 24 ಆಡುಗಳು ಹಾಗು 12 ಮರಿಗಳು ಇರುತ್ತೆವೆ. ದಿನಾಂಕ: 11/09/2022 ರಂದು ನಾನು ಸದರಿ ಆಡುಗಳು ಮತ್ತು ಹೊತಾಗಳನ್ನು ಶಿವಾರದಲ್ಲಿ ಮೈಯಿಸಿದ ನಂತರ ಸಾಯಂಕಾಲ ಮರಳಿ ಮನೆಗೆ ತಂದು ಎಲ್ಲಾ ಆಡು ಮತ್ತು ಹೊತಾ ಹಾಗು ಮರಿಗಳನ್ನು ಕೋಣೆಯಲ್ಲಿ ಹಾಕಿ ಬಾಗಿಲು ಮುಚ್ಚಿ ಕೀಲಿ ಹಾಕಿದ್ದು ನಂತರ ಬೇಳಗ್ಗೆ 6:00 ಎ.ಎಂ ಗಂಟೆ ಸುಮಾರಿಗೆ ಎದ್ದು ಹೊತಾ ಮತ್ತು ಆಡುಗಳು ಇರುವ ಕೋಣೆಗೆ ಹೊಗಿ ನೊಡಲು ಸದರಿ ಕೋಣೆಯ ಹಿಂದಿನ ಕೀಟಿಕಿಯ ಹತ್ತಿರ ಗೋಡೆ ಒಡೆದಿರುವದು ಕಾಣಿಸಿದಾಗ ನಾನು ಗಾಬರಿಗೊಂಡು ಹೊತಾ ಮತ್ತು ಆಡುಗಳು ಎಣಿಸಿ ನೊಡಲು 6 ಹೊತಾಗಳ ಪೈಕಿ 5 ಹೊತಾಗಳು ಮತ್ತು 24 ಆಡುಗಳ ಪೈಕಿ 4 ಆಡುಗಳು ಕಡಿಮೆ ಇರುತ್ತದೆ. ಅವುಗಳನ್ನು ಯಾರೊ ಅಪರೀಚಿತ ಕಳ್ಳರು ಕಳ್ಳತನ ಮಾಡಿಕೊಂಡು ಹೊಗಿರುತ್ತಾರೆ. ಕಳ್ಳುವಾದ 5 ಹೊತಾಗಳ ಅ.ಕಿ. 35000/- ರೂಪಾಯಿ ಮತ್ತು 4 ಆಡುಗಳ ಅ.ಕಿ. 48000/- ರೂಪಾಯಿ ಇರುತ್ತದೆ. ಹೀಗೆ ದಿನಾಂಕ: 12/09/2022 ರಂದು 0200 ಗಂಟೆಯಿಂದ 0600 ಗಂಟೆಯ ಮದ್ಯದ ಅವಧಿಯಲ್ಲಿ ಯಾರೊ ಅಪರೀಚಿತ ಕಳ್ಳರು ನಮ್ಮ ಮನೆಯ ಗೊಡೆ ಒಡೆದು ಅದರಲ್ಲಿ ಇದ್ದ 5 ಹೊತಾಗಳು ಅ.ಕಿ. 35000/- ರೂಪಾಯಿ ಮತ್ತು 4 ಆಡುಗಳು ಅ.ಕಿ. 48000/- ರೂಪಾಯಿ ಅಂತ ಒಟ್ಟು 83000/- ರೂಪಾಯಿ ಬೆಲೆಯ ಹೊತಾ ಮತ್ತು ಆಡುಗಳು ಕಳ್ಳತನ ಮಾಡಿಕೊಂಡು ಹೊಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.